ನೌಕರರುಗಳಿಗೆ ನಿವೃತ್ತಿ ವೇತನ

1805(2189); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ (ಒಡೆತನದ) ಕಾರ್ಖಾನೆಗಳು ಎಷ್ಟು?

ಆ) ಕರ್ನಾಟಕ ವಿದ್ಯುತ್ ಕಾರ್ಖಾನೆ (ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಮೈಸೂರು ರಸ್ತೆ, ಬೆಂಗಳೂರು–26) ಈ ಕಾರ್ಖಾನೆಯನ್ನು ಯಾವಾಗ ಮರುನಾಮಕರಣ ಮಾಡಲಾಯಿತು?

ಇ) ಹಾಗಾದರೆ, ಕರ್ನಾಟಕ ವಿದ್ಯುತ್ ಕಾರ್ಖಾನೆ (ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಮೈಸೂರು ರಸ್ತೆ, ಬೆಂಗಳೂರು–26) ನಿವೃತ್ತ ನೌಕರರುಗಳಿಗೆ/ ಮೃತ ನೌಕರರುಗಳ ಕುಟುಂಬದವರಿಗೆ ನಿವೃತ್ತಿ ಸೌಲಭ್ಯ ದೊರೆಯದಿರಲು ಕಾರಣವೇನು?

ಈ) ಹಾಗಿದ್ದಲ್ಲಿ, ಎಷ್ಟು ನೌಕರರು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ, ವಿವರ ನೀಡುವುದು?

ಉ) ಹಾಗಾದರೆ, ಸರ್ಕಾರವು ನಿವೃತ್ತ ಸೌಲಭ್ಯ ವಂಚಿತ ನೌಕರರುಗಳಿಗೆ ಎಂದಿನಿಂದ ನಿವೃತ್ತಿ ವೇತನವನ್ನು ಜಾರಿ ಮಾಡುವ ಉದ್ದೇಶ ಸರ್ಕಾರದ ಮುಂದೆ ಇದೆಯೇ? ಸಂಪೂರ್ಣ ವಿವರ ನೀಡುವುದು.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) 09

ಆ) 01–08–1976

ಇ) ಸರ್ಕಾರಿ ಪತ್ರ ಸಂಖ್ಯೆ ಸಿಐ 17 ಡಿಇಎಫ್ 75 (86) ದಿನಾಂಕ: 04.07.1978ರಲ್ಲಿ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ನೌಕರರ ಸೇವೆಯನ್ನು (GEF) ಕರ್ನಾಟಕ ವಿದ್ಯುತ್ ಕಾರ್ಖಾನೆ (KAVIKA)ಗೆ

ವರ್ಗಾವಣೆ ಮಾಡಲಾಗಿದ್ದು, ಅವರ ಸೇವೆಯನ್ನು ದಿನಾಂಕ 01.07.1978ರಿಂದ ಅನ್ವಯವಾಗುವಂತೆ ಸರ್ಕಾರದ ಸೇವೆಯಿಂದ ಮುಕ್ತಗೊಳಿಸಲಾಗಿದ್ದು, ನಿವೃತ್ತಿ ಸಮಯದಲ್ಲಿ ನಿವೃತ್ತ/ಮೃತ ನೌಕರರಿಗೆ ಕಾರ್ಖಾನೆಯ ಸ್ಥಾಯಿ ಆದೇಶ ಹಾಗೂ ಒಡಂಬಡಿಕೆಯ ರೀತ್ಯ ಎಲ್ಲಾ ನಿವೃತ್ತಿ ಸೌಲಭ್ಯಗಳನ್ನು ನೀಡಲಾಗಿದೆ.

ಈ) ಅನ್ವಯಿಸುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ತೆಂಗಿನ ನುಸಿ ಪೀಡೆ ರೋಗದ ಬಗ್ಗೆ

1807(1995); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ತೆಂಗಿನ ನುಸಿಪೀಡೆರೋಗ ಕಾಣಿಸಿಕೊಂಡ ನಂತರ ಇದರ ನಿವಾರಣೆಗೆ ತೆಂಗಿನ ಮರದಿಂದ ನೀರಾ ಇಳಿಸಲು ಈ ಹಿಂದೆ ಸರ್ಕಾರವು ಅವಕಾಶವನ್ನು ಕಲ್ಪಿಸಿದ್ದು ನಿಜವೇ;

ಆ) ನಿಜವಿದ್ದಲ್ಲಿ ತೆಂಗಿನ ನೀರಾ ಇಳಿಸಲು ಈಗ ಅನುಮತಿ ನೀಡುವ ಬಗ್ಗೆ ಮೀನಾಮೇಷ ಎಣಿಸಲು ಕಾರಣಗಳೇನು; ಇದರಿಂದಾಗಿ ಸಾವಿರಾರು ತೆಂಗು ಬೆಳೆಯುವ ರೈತ ಕುಟುಂಬಗಳು ಆತಂಕದಲ್ಲಿರುವ ಬಗ್ಗೆ ಸರ್ಕಾರ ನಿಲುವೇನು; ಸ್ಪಷ್ಟಪಡಿಸುವುದು.

ಇ) ಈ ಬಗ್ಗೆ ತೆಂಗು ಅಭಿವೃದ್ಧಿ ಮಂಡಳಿಯು ರಾಜ್ಯ ಸರ್ಕಾರವನ್ನು ಕೋರಿದೆಯೇ; ಹಾಗಿದ್ದಲ್ಲಿ ಯಾವಾಗ ಅನುಮತಿ ನೀಡಲು ನಿರ್ಧರಿಸಲಾಗಿದೆ; ವಿಳಂಬಕ್ಕೆ ಕಾರಣಗಳೇನು;

ಈ) ನೀರಾವನ್ನು ಇಳಿಸುವ ಹೆಚ್ಚುವರಿ ಆದಾಯದಿಂದ ರೈತರನ್ನು ವಂಚಿತರನ್ನಾಗಿ ಸರ್ಕಾರ ಮಾಡುತ್ತಿದೆಯೇ? ಇದಕ್ಕಾಗಿ ಅಬಕಾರಿ ಕಾಯ್ದೆ ತಿದ್ದುಪಡಿ ತರಲು ಉದ್ದೇಶಿಸಿದೆಯೇ? ಯಾವಾಗ ತರಲಾಗುವುದು? ಇದರ ಸಾಧಕ–ಬಾಧಕಗಳೇನು?